ಎಲ್ಲಿಯವರೆಗೂ ಹೋರಾಟ, ಗೆಲ್ಲೋವರೆಗೂ ಹೋರಾಟ                ಏನೇ ಬರಲಿ ಒಗ್ಗಟ್ಟಿರಲಿ

# GATWU Garment and Textile Workers Union
## ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್

# ಸಂಘಟಿತ ಹೋರಾಟದಿಂದಾಗಿ ಹೆಚ್ಚಿದ ಗಾರ್ಮೆಂಟ್ಸ್ ಕಾರ್ಮಿಕರ ವೇತನ

ಗಾರ್ಮೆಂಟ್ಸ್ ಕಾರ್ಮಿಕರಿಗೆ ಕನಿಷ್ಠ ವೇತನ ಪರಿಷ್ಕರಣೆಯಾಗಿದ್ದು, ದಿನಾಂಕ **1.4.2014** ರಿಂದ ಈ ಆದೇಶವು ಜಾರಿಗೆ ಬರುತ್ತಿದೆ. ಬೆಂಗಳೂರು ನಗರ ಮತ್ತು ರಾಜ್ಯದ ಉಳಿದ ಮಹಾನಾಗರ ಪಾಲಿಕೆಗಳನ್ನು ಹೊರತು ಪಡಿಸಿ, ಉಳಿದ ಎಲ್ಲಾ ಜಿಲ್ಲೆ, ತಾಲೂಕು ಮತ್ತು ಗ್ರಾಮಪಂಚಾಯತಿ ವ್ಯಾಪ್ತಿ (ವಲಯ-**3**)ಗೆ ಮೂಲವೇತನ ಮತ್ತು ತುಟ್ಟಿಭತ್ಯೆ (ರೂ. **32.53**) ಎರಡೂ ಸೇರಿಸಿ, ಈ ಕೆಳಗಿನಂತೆ ವೇತನ ಹೆಚ್ಚಾಗಿದೆ.

| | |
|---|---|
| 1. ಕುಶಲವಲ್ಲದ (ಹೆಲ್ಪರ್, ಪ್ಯಾಕರ್, ಲೇಯರ್, ಟ್ರಿಮರ್,) | ರೂ. **183.22** ರಿಂದ ರೂ. **242.53** (ತಿಂಗಳಿಗೆ **6305.78**) |
| 2. ಅರೆಕುಶಲ (K/B ಆಪರೇಟರ್, ಮೆಷರ್‌ಮೆಂಟ್ ಚೆಕರ್, ಐರನರ್, ಓವರ್‌ಲಾಕ್ ಆಪರೇಟರ್, 2ನೇ ದರ್ಜೆ ಟೈಲರ್) | ರೂ. **191.12** ರಿಂದ ರೂ. **251.53** (ತಿಂಗಳಿಗೆ **6539.78**) |
| 3. ಕುಶಲ (1ನೇ ದರ್ಜೆ ಟೈಲರ್, ಚೆಕರ್) | ರೂ. **193.52** ರಿಂದ ರೂ. **254.53** (ತಿಂಗಳಿಗೆ **6617.78**) |
| 4. ಅತಿಕುಶಲ (ಟೈಲರ್) | ರೂ. **194.02** ರಿಂದ ರೂ. **262.53** (ತಿಂಗಳಿಗೆ **6825.78**) |

**ಪ್ರಸ್ತುತ ಕಾರ್ಮಿಕರು ವೇತನದಲ್ಲಿ ಸಾರಿಗೆ ಭತ್ಯೆ, ಮನೆ ಬಾಡಿಗೆ ಭತ್ಯೆ ಮತ್ತು ಇತರ ಭತ್ಯೆಗಳನ್ನು ಪಡೆಯುತ್ತಿದ್ದಲ್ಲಿ ಅವು ಎಂದಿನಂತೇ ಮುಂದುವರೆಯಬೇಕು. ಮಾಲೀಕ ವರ್ಗವು ಮೂಲವೇತನ ಮತ್ತು ತುಟ್ಟಿಭತ್ಯೆಯನ್ನು ಹೆಚ್ಚಿಸಬೇಕೇ ಹೊರತು, ಈ ಭತ್ಯೆಗಳನ್ನು ರದ್ದುಗೊಳಿಸಲು ಅಥವಾ ಅದಲು ಬದಲು ಮಾಡುವಂತಿಲ್ಲ.**

ಆತ್ಮೀಯ ಸಂಗಾತಿಗಳೇ,

ಗಾರ್ಮೆಂಟ್ಸ್ ಕಾರ್ಮಿಕರ ಕನಿಷ್ಠವೇತನವು ಹೆಚ್ಚಾಗಬೇಕೆಂದು GATWU ವು 2007 ರಿಂದಲೂ ಹೋರಾಟ ನಡೆಸುತ್ತಿದ್ದು, ತಾವೆಲ್ಲರೂ ಈ ಹೋರಾಟದ ಭಾಗವಾಗಿದ್ದೀರಿ. ಕಳೆದ 33 ವರ್ಷಗಳಿಂದ ಕನಿಷ್ಠವೇತನ ಪರಿಷ್ಕರಣೆಯ ಸಂದರ್ಭಗಳಲ್ಲಿ ಮಾಲೀಕವರ್ಗ ಹಾಗೂ ಸರ್ಕಾರಗಳು ಸೇರಿ ಗಾರ್ಮೆಂಟ್ಸ್ ಕಾರ್ಮಿಕರಿಗೆ ವಂಚನೆ ಮಾಡುತ್ತಿದ್ದರೂ, ಕಾರ್ಮಿಕರ ಪರವಾಗಿ ಯಾರೂ ಧ್ವನಿ ಎತ್ತಿರಲಿಲ್ಲ. 2006 ರಿಂದ GATWU ಗಾರ್ಮೆಂಟ್ಸ್ ಕಾರ್ಮಿಕರಿಗಾಗುತ್ತಿರುವ ಈ ಅನ್ಯಾಯದ ಬಗ್ಗೆ ಹೋರಾಟ ನಡೆಸುತ್ತಾ ಬಂದು, ಸರ್ಕಾರದ ಮಟ್ಟದಲ್ಲಿ ಮತ್ತು ನ್ಯಾಯಾಲಯದಲ್ಲಿ ಸಮರ್ಥವಾಗಿ ಕಾರ್ಮಿಕರನ್ನು ಪ್ರತಿನಿಧಿಸಿತು. ಇದರ ಪರಿಣಾಮವಾಗಿ, ಕರ್ನಾಟಕ ಉಚ್ಚ ನ್ಯಾಯಾಲಯವು, ವೇತನ ಪರಿಷ್ಕರಣೆಯಲ್ಲಿ ಕಾರ್ಮಿಕರಿಗಾದ ಅನ್ಯಾಯವನ್ನು ಮನಗಂಡು, ಕಾರ್ಮಿಕರಿಗೆ ನ್ಯಾಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಮಾರ್ಚ್ 2013 ರಲ್ಲಿ ತೀರ್ಪು ನೀಡಿತು. ಈ ತೀರ್ಪಿನ ಪರಿಣಾಮವೇ ಈ ಮೇಲಿನ ವೇತನ ಹೆಚ್ಚಳ!

ಈ ಹಿಂದಿನ ವೇತನ ಪರಿಷ್ಕರಣೆಗಳಲ್ಲಿ ದಿನಕ್ಕೆ 1 ಅಥವಾ 2 ರೂ ಮಾತ್ರವೇ ಹೆಚ್ಚಾಗುತ್ತಿತ್ತು, ಅದನ್ನೂ ಸಹ ಕೊಡಲಾಗುವುದಿಲ್ಲ ಎಂದು ಮಾಲೀಕರು ವಿರೋಧಿಸುತ್ತಿದ್ದರು! ಪರಿಣಾಮವಾಗಿ ಕಾರ್ಮಿಕರಿಗೆ ಸಿಗುತ್ತಿದ್ದ ವೇತನ ಅತ್ಯಂತ ಕಡಿಮೆಯೇ ಇತ್ತು. GATWU ವಿನ ಸತತ ಹೋರಾಟದಿಂದ ಇಂದು ಗಾರ್ಮೆಂಟ್ಸ್ ಕಾರ್ಮಿಕರಿಗೆ ಒಂದು ದಿನಕ್ಕೆ ರೂ. 27 ರಷ್ಟು ವೇತನ ಹೆಚ್ಚಳವಾಗಿದೆ. ಕಾರ್ಮಿಕರ ಪ್ರತಿಭಟನೆಗೆ, ಹೋರಾಟಕ್ಕೆ ಎಂತಹ ಶಕ್ತಿ ಇದೆ ಎಂದು ಇದರಿಂದಲೇ ನಾವು ತಿಳಿಯಬಹುದು.

ಈಗ ಹೆಚ್ಚಾಗಿರುವ ವೇತನವೂ ಸಹ ಕಾರ್ಮಿಕರಿಗೆ ಜೀವನ ನಡೆಸಲು ಸಾಲುವುದಿಲ್ಲ, ಸರ್ಕಾರ ನೇಮಿಸಿದ 'ಶಾಂತಪ್ಪ ಸಮಿತಿಯ' ವರದಿಯೂ ಸಹ ಇದನ್ನು ಸಮರ್ಥಿಸುತ್ತದೆ. ಆದರೆ ಹೋರಾಟದ ಮೊದಲ ಹೆಜ್ಜೆಯಾಗಿ, ಇಷ್ಟು ವೇತನ ಪಡೆಯುವಲ್ಲಿ ನಾವು ಯಶಸ್ವಿಯಾಗಿದ್ದೇವೆ, ಮತ್ತು ಬದುಕುವ ವೇತನ ಪಡೆಯುವ ನಮ್ಮ ಮುಂದಿನ ಹೋರಾಟಕ್ಕೆ ಇದು ಸ್ಫೂರ್ತಿಯಾಗಿದೆ. ಎಲ್ಲ ಕಾರ್ಮಿಕರೂ GATWU ವಿಗೆ ಸದಸ್ಯರಾಗುವ ಮೂಲಕ ಹೋರಾಟಕ್ಕೆ ಬೆಂಬಲಿಸಿ, ನಿಮ್ಮ ಬೆಂಬಲವೇ ಸಂಘಟನೆಯ ಬಲ.


ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸ ಅಥವಾ ದೂರವಾಣಿಯಲ್ಲಿ ಸಂಪರ್ಕಿಸಿ:

**ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ GATWU**

ಮೈಸೂರು ರಸ್ತೆ ಕಛೇರಿ : ನಂ. 17/1, ಮೊದಲನೇ ಮಹಡಿ, ಬಿ.ಎಂ.ಟಿ.ಸಿ ಬಸ್ ಸ್ಟಾಪ್ ಹತ್ತಿರ, ಹೊಸಗುಡ್ಡದಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 026.
ದೂರವಾಣಿ: 080-26745242

ಪೀಣ್ಯ ಕಛೇರಿ : ನಂ. 13, ಮುನೇಶ್ವರ ದೇವಸ್ಥಾನದ ಹತ್ತಿರ, 5ನೇ ಅಡ್ಡರಸ್ತೆ, ನೆಲಗೆದರನಹಳ್ಳಿ, ನಾಗಸಂದ್ರ ಪೋಸ್ಟ್, ಬೆಂಗಳೂರು–560 073.

ಮೊಬೈಲ್ ಸಂಖ್ಯೆ: 9901290495, 9686229761, 9844714476, 8792156541


Scanned with OKEN Scanner

# GATWU Garment and Textile Workers Union
## ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್

## ಕಾರ್ಮಿಕರಿಗೆ ತಿಳಿದಿರಲೇಬೇಕಾದ ಕೆಲವು ಕಾರ್ಮಿಕ ಕಾನೂನುಗಳು

- ಕೆಲಸಕ್ಕೆ ಸೇರಿದ ತಕ್ಷಣವೇ ಪ್ರತಿಯೊಬ್ಬ ಕಾರ್ಮಿಕರಿಗೂ ವಿವರವಾದ ನೇಮಕಾತಿ ಪತ್ರ ಕೊಡಬೇಕು.
- ಪ್ರತಿ ತಿಂಗಳೂ ವೇತನ ನೀಡುವ ಸಂದರ್ಭದಲ್ಲಿ ವಿವರವಾದ ವೇತನ ಚೀಟಿ ನೀಡಬೇಕು.
- ಪ್ರತಿ ತಿಂಗಳೂ 10ನೆಯ ದಿನಾಂಕದೊಳಗೆ ವೇತನ ಪಾವತಿಸಬೇಕು.
- 240 ದಿನ ಕೆಲಸ ಮಾಡಿದ ಕಾರ್ಮಿಕರನ್ನು **"ಖಾಯಂ ಕಾರ್ಮಿಕ"**ರೆಂದು ಪರಿಗಣಿಸಬೇಕು.
- ಯಾವುದೇ ಸಂದರ್ಭದಲ್ಲಿಯೂ ಲಿಖಿತ ಕಾರಣ ನೀಡದೆ, ಕಾರ್ಮಿಕರನ್ನು ಕೆಲಸದಿಂದ ತೆಗೆಯುವಂತಿಲ್ಲ.
- ಪ್ರತಿ 20 ಕೆಲಸದ ದಿನಕ್ಕೆ 1 ದಿನ **'ಗಳಿಕೆ ರಜೆಯಾಗಿ'** ಕಾರ್ಮಿಕರ ಖಾತೆಗೆ ಸೇರುತ್ತದೆ. (ಪ್ರತಿ ವರ್ಷ ಜನವರಿ 1 ರಿಂದ ಡಿಸೆಂಬರ್ 31 ಅವಧಿಗೆ ಲೆಕ್ಕ ಹಾಕಲಾಗುತ್ತದೆ)
- ಕಾರ್ಮಿಕರಿಗೆ ರಜೆಯ ಅವಶ್ಯಕತೆ ಇರುವಾಗ ಅನುಮತಿಯೊಂದಿಗೆ ತಮ್ಮ ಗಳಿಕೆ ರಜೆಯನ್ನು ಉಪಯೋಗಿಸಿಕೊಳ್ಳಲು ಹಕ್ಕಿದೆ.
- ತುರ್ತು ಸಂದರ್ಭದಲ್ಲಿ, ಮುಂಚಿತವಾಗಿಯೇ ಅನುಮತಿ ಪಡೆದುಕೊಳ್ಳಲು ಸಾಧ್ಯವಾಗದಿದ್ದಲ್ಲಿ, ರಜೆ ತೆಗೆದುಕೊಂಡ ಮರುದಿನ ಆಡಳಿತ ವರ್ಗಕ್ಕೆ ರಜೆ ಚೀಟಿಯನ್ನು ಕೊಡಬೇಕು.
- 240 ದಿನಗಳು ಕೆಲಸ ಮಾಡಿ, ಕೆಲಸ ಬಿಟ್ಟ ಕಾರ್ಮಿಕರಿಗೆ, ಅವರ ಖಾತೆಯಲ್ಲಿರುವ **'ಗಳಿಕೆ ರಜೆ'**ಯ ವೇತನವನ್ನು ಪಡೆದುಕೊಳ್ಳುವ ಹಕ್ಕಿದೆ.
- ವರ್ಷಕ್ಕೊಮ್ಮೆ ಕನಿಷ್ಠ **8.33% ಬೋನಸ್** ಕೊಡಬೇಕು.
- ಮೂರು ತಿಂಗಳು ಕೆಲಸ ಮಾಡಿ ಕೆಲಸ ಬಿಟ್ಟ ಕಾರ್ಮಿಕರಿಗೂ ಬೋನಸ್ ಕೊಡಬೇಕು.
- ಕಾರ್ಮಿಕರನ್ನು ಒಂದು ವಿಭಾಗಿದಿಂದ ಮತ್ತೊಂದು ವಿಭಾಗಕ್ಕೆ ವರ್ಗಾವಣೆ ಮಾಡಿದಾಗ ಅವರಿಗೆ ಲಿಖಿತ ಆದೇಶ ನೀಡಬೇಕು.
- ಕಾರ್ಮಿಕರು ಕಾರ್ಮಿಕ ಸಂಘದಲ್ಲಿ ಸದಸ್ಯರಾಗಲು ಹಕ್ಕಿದೆ.
- ಕಾರ್ಮಿಕರು ಕೆಲಸ ಮಾಡುವ ಜಾಗದಲ್ಲಿ ಸ್ವಚ್ಛ ಗಾಳಿ ಮತ್ತು ಬೆಳಕು ಇರುವಂತೆ ನೋಡಿಕೊಳ್ಳಬೇಕು.
- 30ಕ್ಕಿಂತ ಹೆಚ್ಚು ಮಹಿಳಾ ಕಾರ್ಮಿಕರಿರುವ ಕಾರ್ಖಾನೆಯಲ್ಲಿ ಅವರ 5 ವರ್ಷದವರೆಗಿನ ಮಕ್ಕಳನ್ನು ನೋಡಿಕೊಳ್ಳಲು ಬಾಲವಾಡಿ ಇರಬೇಕು ಮತ್ತು ತರಬೇತಿ ಹೊಂದಿರುವ ಶಿಕ್ಷಕರು, ಆಯಾ ಇರಬೇಕು,.
- 500ಕ್ಕಿಂತ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಯಲ್ಲಿ ವೈದ್ಯರ ವ್ಯವಸ್ಥೆ ಇರಬೇಕು.
- 250ಕ್ಕಿಂತ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಯಲ್ಲಿ ಕ್ಯಾಂಟೀನ್ ವ್ಯವಸ್ಥೆ ಇರಬೇಕು.
- ಕೆಲಸ ಮಾಡುವ ಸಮಯದಲ್ಲಿ ಕಾರ್ಮಿಕರು ಕುಳಿತುಕೊಳ್ಳಲು ವ್ಯವಸ್ಥೆ ಮಾಡಬೇಕು.
- ಕಾರ್ಮಿಕರಿಗೆ ಶುದ್ಧವಾದ ಕುಡಿಯುವ ನೀರು ಪೂರೈಸಬೇಕು.
- ಕಾರ್ಖಾನೆಯಲ್ಲಿ ಕಾರ್ಮಿಕರ ವಿಶ್ರಾಂತಿಗಾಗಿ ಕೊಠಡಿ ಇರಬೇಕು.
- ಗರ್ಭಿಣಿಯರಿಗೆ ಕೆಲಸದಲ್ಲಿ ರಿಯಾಯಿತಿ ಕೊಡಬೇಕು.
- ಬಲವಂತವಾಗಿ ಓ.ಟಿ. ಮಾಡಿಸುವಂತಿಲ್ಲ. ಕಾರ್ಮಿಕರು ಇಷ್ಟ ಪಟ್ಟು ಓ.ಟಿ. ಮಾಡಿದರೆ ಅದಕ್ಕೆ ಎರಡರಷ್ಟು ವೇತನ ನೀಡಬೇಕು.
- ದಿನಕ್ಕೆ 1 ಗಂಟೆಗಿಂತ ಹೆಚ್ಚು ಕಾಲ ಓ.ಟಿ. ಮಾಡಿಸುವಂತಿಲ್ಲ. ಮತ್ತು ತಿಂಗಳಲ್ಲಿ 25 ಗಂಟೆಗಳಿಗಿಂತ ಹೆಚ್ಚು ಓ.ಟಿ. ಕೆಲಸ ಮಾಡಿಸುವಂತಿಲ್ಲ
- ಬಲವಂತವಾಗಿ ಕಾಂಪ್ ಆಫ್ ಮಾಡಿಸುವಂತಿಲ್ಲ.
- ವಿಶ್ರಾಂತಿಯಿಲ್ಲದೆ 4 ಗಂಟೆಗೂ ಹೆಚ್ಚು ಕಾಲ ಕೆಲಸ ಮಾಡಿಸುವಂತಿಲ್ಲ.
- ಕೆಲಸಕ್ಕೆ ಸೇರಿದ ದಿನದಿಂದಲೇ ಇ.ಎಸ್.ಐ. ಮತ್ತು ಪಿ.ಎಫ್. ಅನ್ನು ಕಡಿತಗೊಳಿಸಬೇಕು. (ಇ.ಎಸ್.ಐ ಮತ್ತು ಪಿ.ಎಫ್)


ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸ ಅಥವಾ ದೂರವಾಣಿಯಲ್ಲಿ ಸಂಪರ್ಕಿಸಿ:

**ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ GATWU**

ಮೈಸೂರು ರಸ್ತೆ ಕಛೇರಿ : ನಂ. 17/1, ಮೊದಲನೇ ಮಹಡಿ, ಬಿ.ಎಂ.ಟಿ.ಸಿ ಬಸ್ ಸ್ಟಾಪ್ ಹತ್ತಿರ, ಹೊಸಗುಡ್ಡದಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 026.
ದೂರವಾಣಿ: 080-26745242

ಪೀಣ್ಯ ಕಛೇರಿ : ನಂ. 13, ಮುನೇಶ್ವರ ದೇವಸ್ಥಾನದ ಹತ್ತಿರ, 5ನೇ ಅಡ್ಡರಸ್ತೆ, ನೆಲಗೆದರನಹಳ್ಳಿ, ನಾಗಸಂದ್ರ ಪೋಸ್ಟ್, ಬೆಂಗಳೂರು–560 073.
ಮೊಬೈಲ್ ಸಂಖ್ಯೆ: 9901290495, 9686229761, 9844714476, 8792156541


Scanned with OKEN Scanner